| | | | |
|---|---|---|---|
| **SRI BHAGAWAN MAHAVEER JAIN COLLEGE**<br>Vishweshwarapuram, Bangalore.<br>**MOCK Question Paper** | | **Course:** | I PUC |
| | | **Subject:** | Kannada |
| | | **Max. Marks:** | 100 |
| | | **Duration:** | 3:15 hrs |

## ಅ–ವಿಭಾಗ

**I ಒಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ:** **1 x 10 = 10**

1 ಪಿನಾಕಪಾಣಿ ಎಂದರೆ ಯಾರು?
2 ಸತ್ಯವ ನುಡಿವುದು ಯಾವುದರ ಶೃಂಗಾರವಾಗಬೇಕು?
3 ಮಾದೇವ ಮಕ್ಕಳ ಸತ್ಯನೋಡಲು ಏನು ಮಾಡಬೇಕೆನ್ನುತ್ತಾನೆ?
4 ಅಣುಬಾಂಬುಗಳಿಗೆ ನೆಲ ಏನಾಗಿದೆ?
5 ಬಡಮಕ್ಕಳ ಪಾಲಿಗೆ ಚಾಕಲೇಟ್ ಯಾವುದು?
6 ಮಾಯಾದೇವಿ ದೇವಾಲಯ ಹೇಗಿತ್ತು?
7 ಜಂಕ್‌ಫುಡ್ ಹೋಟೆಲ್‌ಗಳೆಂದು ಹೀಯಾಳಿಸಿದವರು ಯಾರು?
8 ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಉಂಟಾದ ಆಸೆ ಯಾವುದು?
9 ಬೋಳೇಶಂಕರನ ಹೊಟ್ಟೆನೋವು ಯಾವುದರಿಂದ ಮಾಯವಾಯಿತು?
10 ಕತ್ತಲೆಯ ನಿಜ ಜನಕನು ಯಾರು?

## ಆ–ವಿಭಾಗ

**II ಅ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **2 x 4 = 8**

11 ತನುಮನಧನಗಳನ್ನು ಮರೆಯಲು ಏನನ್ನು ತೋರುತ್ತಾರೆ?
12 ಚೆನ್ನಯ್ಯನ ಗುಪ್ತಭಕ್ತಿ ಯಾವ ರೀತಿಯದು?
13 ಮಾದೇವನ ಶಿಶುಮಕ್ಕಳ ಹೆಸರೇನು?
14 ಚಿತ್ತದಾಸ್ಯ ಕಳೆಯಬೇಕಾಗಿರುವುದು ಯಾರು ಯಾರಿಗೆ?
15 ಭ್ರೂಣಾವಸ್ಥೆಯ ಮಗುವು ಏಕೆ ಗಾಬರಿಗೊಂಡಿದೆ?

**ಆ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **2 x 3 = 6**

16 ನಿಂಗಮ್ಮನ ಗಂಡ ಪ್ರಾಣ ಕಳೆದುಕೊಂಡದ್ದು ಹೇಗೆ?
17 ಗೌತಮನ ಮನೋಲೋಕವನ್ನು ನಿರಂತರವಾಗಿ ದಹಿಸಿದ ಪ್ರಶ್ನೆಗಳು ಯಾವುವು?
18 ಅಪರಾಜಿತಾ ಬಳ್ಳಿಯ ಗುಣ ಯಾವುದು?
19 ಮುದ್ದೆ ಮಾಡಲು ಬೇಕಾದ ಕೌಶಲ್ಯವೇನು?

**ಇ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ:** **2 x 3 = 6**

20 ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ?
21 ಪಿಶಾಚಿಗಳು ಯಾವುದರಿಂದ ನಾಣ್ಯ ಹಾಗೂ ಸಿಪಾಯಿಗಳನ್ನು ಮಾಡಿಕೊಡುತ್ತವೆ?
22 ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?
23 ಬೋಳೇಶಂಕರ ಏನೆಂದು ಡಂಗುರ ಸಾರಿಸುತ್ತಾನೆ?

## ಇ–ವಿಭಾಗ

**III ಅ ಎರಡನ್ನು ಕುರಿತು ಸಂದರ್ಭಸೂಚಿಸಿ ವಿವರಿಸಿ:** **3 x 2 = 6**

24 ನೀಂ ಕ್ರಮವಿಪರ್ಯಯಂ ಮಾಡುವುದೇ.
25 ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು.
26 ಗುಡಿ ಚರ್ಚು ಮಸೀದಿಗಳೆಲ್ಲ ಹಾರಿಹೋಗುತ್ತವೆ.

**ಆ ಒಂದನ್ನು ಕುರಿತು ಸಂದರ್ಭಸೂಚಿಸಿ ವಿವರಿಸಿ:** **3 x 1 = 3**

27 ಪ್ರಗತಿಗೆ ವಿದ್ಯೆಯೇ ಮೂಲ.
28 "ಅಮ್ಮಾ, ಈತ ನಿಜವಾಗಿಯೂ ಮಹಾರಾಜ ದುಷ್ಯಂತನೇ! ಈತನೇ ನನ್ನ ತಂದೆಯೆ?

**ಇ ಒಂದನ್ನು ಕುರಿತು ಸಂದರ್ಭಸೂಚಿಸಿ ವಿವರಿಸಿ: 3 x 1 = 3**

29 ರಾಜಕುಮಾರಿಗೆ ಬಂದಿರೋದು ರಾಜರೋಗ.

30 ಚಿನ್ನ ತಿಂದು ಬದುಕಲಾಗುತ್ತ !

## ಈ–ವಿಭಾಗ

**IVಅ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4 x 3 = 12**

31 ದ್ರೋಣನ ಕಳೇಬರವನ್ನು ಕಂಡು ದುರ್ಯೋಧನ ಹೇಗೆ ದುಃಖಿಸುತ್ತಾನೆ?

32 ಘಟ್ಟಿವಾಳಯ್ಯನ ವಚನಗಳ ಆಶಯಗಳೇನು?

33 ಅಖಂಡ ಕರ್ನಾಟಕವು ಬರೀ ರಾಜಕೀಯ ನಾಟಕವಲ್ಲ, ಏಕೆ?

34 ಭೂಮಿಯ ಹಸಿರನ್ನು ಉಳಿಸಿ ಜೈವಿಕ ಇಂಧನ ಬಳಸುವ ಕವಿಯ ಆಶಯಗಳನ್ನು ವಿವರಿಸಿ.

**ಆ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ವಿವರಿಸಿ: 4 x 2 = 8**

35 ಮೊಮ್ಮಗನ ಪ್ರಾಣ ಉಳಿಸಿಕೊಳ್ಳಲು ಕರಿಸಿದ್ದೇಗೌಡ ಪಟ್ಟ ಪಾಡೇನು?

36 ಅವಳಿ ಮಕ್ಕಳ ಸಾವು ಮಾಸ್ತರರ ಬದುಕನ್ನೇ ಬದಲಾಯಿಸಿದ್ದು ಹೇಗೆ? ವಿವರಿಸಿ.

37 ರಂಗರಾವ್ ಅಸ್ಪೃಶ್ಯರನ್ನು ಶಿಕ್ಷಣ ಪಡೆಯಲು ಮನಸ್ಸು ಗೆದ್ದ ಬಗೆಯನ್ನು ತಿಳಿಸಿ.

**ಇ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ: 4 x 2 = 8**

38 ರಾಜಕುಮಾರಿಯ ಹೊಟ್ಟೆನೋವು ಪ್ರಸಂಗದಿಂದ ಬೋಳೇಶಂಕರ ರಾಜನಾಥ ಕಥೆಯನ್ನು ತಿಳಿಸಿ.

39 ತನ್ನ ಕನಸನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು?

40 'ಹಸಿರೇ ಉಸಿರು' ಎಂಬುದನ್ನು ಬೋಳೇಶಂಕರನ ಪಾತ್ರದ ಮೂಲಕ ನಾಟಕಕಾರರು ಹೇಗೆ ಸ್ಪಷ್ಟಪಡಿಸಿದ್ದಾರೆ? ವಿಮರ್ಶಿಸಿ.

## ಉ–ವಿಭಾಗ

**V ಅ ಒಂದು ಪದ್ಯದ ಭಾವಾರ್ಥ ಬರೆಯಿರಿ: 5 x 1 = 5**

41 ಉಡಿದಿರ್ದ ಕೆಯ್ದು ನೆತ್ತರ
ಕಡಲೊಳಗಡಿಗಡಿಗೆ ತಳಮನುರ್ಚುತ್ತಿರೆ ಕಾ
ಲಿಡಲೆಡೆವಡೆಯದೆ ಕುರುಪತಿ
ದಡಿಗವೆಣಂಗಳನೆ ಮೆಟ್ಟಿ ಮೆಲ್ಲನೆ ನಡೆದಂ.

42 ಕಾಲುಗಳೆಂಬವು ಗಾಲಿ ಕಂಡಯ್ಯಾ,
ದೇಹವೆಂಬುದು ತುಂಬಿದ ಬಂಡಿ ಕಂಡಯ್ಯಾ,
ಬಂಡಿಯ ಹೊಡೆವವರೈವರೂ ಮಾನಿಸರು,
ಒಬ್ಬರಿಗೊಬ್ಬರು ಸಮವಿಲ್ಲಯ್ಯ
ಅದರಿಚ್ಚೆಯನರಿದು ಹೊಡೆಯದಿರ್ದಡೆ
ಅದರಚ್ಚು ಮುರಿಯಿತ್ತು ಗುಹೇಶ್ವರಾ.

## ಊ–ವಿಭಾಗ

**ಆ ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ: 2 x 6 = 12**

| | | | |
|---|---|---|---|
| 43 | **ಪದಗಳ ಅರ್ಥ ಬರೆಯಿರಿ:–** | ತಲ್ಲಣ, | ದಂಧಾ |
| 44 | **ಬಿಡಿಸಿ ಬರೆಯಿರಿ:–** | ಪನ್ನಗಾಭರಣ, | ಮಹಾಟ್ಟಹಾಸ |
| 45 | **ತತ್ಸಮ–ತದ್ಭವಗಳನ್ನು ಬರೆಯಿರಿ:–** | ವೀಧಿ, | ಪ್ರಾಯ |
| 46 | **ವಿರುದ್ಧ ಪದ ಬರೆಯಿರಿ:–** | ಬೀಳು | ಆಡಂಬರ |
| 47 | **ನಾನಾರ್ಥಗಳನ್ನು ಬರೆಯಿರಿ:–** | ಬಟ್ಟೆ, | ಪಡೆ |
| 48 | **ದ್ವಿರುಕ್ತಿ ಪದಗಳನ್ನು ಬಳಸಿ:–** | ಒಳಗೊಳಗೆ, | ಮೆಲ್ಲಮೆಲ್ಲನೆ |
| 49 | **ಯಾವುದಾದರು ಎರಡು ಅನ್ಯದೇಶ್ಯ ಪದಗಳನ್ನು ಹೆಸರಿಸಿ:** | | |

**ಇ ಒಂದನ್ನು ಕುರಿತು ಪ್ರಬಂಧ ಬರೆಯಿರಿ: 5 x 1 = 5**

50 ಕೃಷಿ ಪದ್ಧತಿ

51 ಬದುಕುವ ಕಲೆ.

**ಈ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ:– 4 x 1 = 4**

52 ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ಹಾಗು ಪ್ರವಾಸದ ಖರ್ಚಿಗಾಗಿ ಹಣ ಕೋರುತ್ತ ತಂದೆಗೆ ಒಂದು ಪತ್ರ ಬರೆಯಿರಿ.

53 ನಿಮ್ಮ ಪ್ರಾಂತ್ಯದ ಬರಗಾಲವನ್ನು ವಿವರಿಸಿ ಜಿಲ್ಲಾಧಿಕಾರಿಗೆ ಪತ್ರ ಬರೆದು ಬರ ಪರಿಹಾರ ಕಾರ್ಯಕೈಗೊಳ್ಳಲು ವಿನಂತಿಸಿ.

**ಉ ಒಂದನ್ನು ವಿಸ್ತರಿಸಿ ಬರೆಯಿರಿ: 4 x 1 = 4**

54 ಆಕಳು ಕಪ್ಪಾದರೆ ಹಾಲು ಕಪ್ಪೆ ?

55 ಮಾಡಿದುಣ್ಣೊ ಮಹಾರಾಯ.

*******